
# ಬಾಗಲೋಡಿ ದೇವರಾಯ

## (1927-1985)



ಕತೆಗಾರ ಮಾಸ್ತಿ ಸಂಪ್ರದಾಯದಲ್ಲಿ ಕತೆಗಳನ್ನು ಬರೆದ ಬಾಗಲೋಡಿ ದೇವರಾಯ ಅವರು ಮಂಗಳೂರಿಗೆ ಸಮೀಪದ ಕಿನ್ನಿಕಂಬಳ ಗ್ರಾಮದವರು. ತಂದೆ ಕೃಷ್ಣರಾಯ, ತಾಯಿ ಲಕ್ಷ್ಮಿ. ದೇವರಾಯರ ಆರಂಭಿಕ ವಿದ್ಯಾಭ್ಯಾಸ ಆಗಿದ್ದು ಮಂಗಳೂರಿನಲ್ಲಿ. ಬಳಿಕ ಮದ್ರಾಸ್‌ನಲ್ಲಿ ಬಿ.ಎ ಪದವಿ ಪಡೆದರು. ಪದವಿಯ ಬಳಿಕ ವೃತ್ತಿಯಾಗಿ ಆರಿಸಿಕೊಂಡಿದ್ದು ವಿದೇಶಾಂಗ ಸೇವೆಯನ್ನು. ಮೂರು ದಶಕಗಳ ಕಾಲ ಭಾರತದ ವಿದೇಶಾಂಗ ಸೇವೆ(ಐಎಫ್‌ಎಸ್)ಯಲ್ಲಿ ರಾಜತಾಂತ್ರಿಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾದರು. ರಷ್ಯಾ, ಇಟಲಿ, ನೈಜೀರಿಯ, ನೇಪಾಳ, ಫಿಲಿಪ್ಪೀನ್ಸ್, ಲಾವೋಸ್, ನ್ಯೂಜಿಲೆಂಡ್, ಬಲ್ಗೇರಿಯಾಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ್ದರು. ಈ ಸೇವೆಗೆ ಸೇರುವ ಮುನ್ನ ಅವರು ಮದ್ರಾಸ್, ಕಾರೈಕುಡಿ ಮತ್ತು ಮಂಗಳೂರುಗಳಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದರು.

ದೇವರಾಯರ ಮೊದಲ ಕತೆಗಳನ್ನು ಮಾಸ್ತಿ ತಾವು ಸಂಪಾದಿಸುತ್ತಿದ್ದ 'ಜೀವನ' ಪತ್ರಿಕೆಯಲ್ಲಿ ಪ್ರಕಟಿಸಿದರು. ಮಾಸ್ತಿಯವರೇ ಬಾಗಲೋಡಿಯವರ ಮೊದಲ ಕಥಾ ಸಂಗ್ರಹ 'ಹುಚ್ಚ ಮುನಸೀಫ ಮತ್ತು ಇತರ ಕತೆಗಳು' ಪ್ರಕಟಿಸಿದ್ದು. ಈ ಸಂಕಲವೂ ಸೇರಿದಂತೆ ಅವರ ಪ್ರಕಟಿತ ಕಥಾ ಸಂಗ್ರಹಗಳು ಮೂರು. ಇನ್ನುಳಿದ ಎರಡು – 'ಆರಾಧನಾ' ಮತ್ತು 'ರುದ್ರಪ್ಪನ ರೌದ್ರ ಮತ್ತು ಇತರ ಕತೆಗಳು'.

ತಮ್ಮದೇ ಶೈಲಿ, ವ್ಯಂಗ್ಯಗಳಿರುವ, ಮನುಷ್ಯನ ಮೂಲ ಸ್ವಭಾವಗಳನ್ನು ಚಿತ್ರಿಸುವ ಭಿನ್ನ ಕತೆಗಳನ್ನು ಅವರು ಬರೆದಿದ್ದಾರೆ. ಇಲ್ಲಿ ಕೊಡಲಾಗಿರುವ 'ರುದ್ರಪ್ಪನ ರೌದ್ರ' ದೇವರಾಯರ ಮುಖ್ಯ ಕತೆಗಳಲ್ಲೊಂದು. ಕನ್ನಡ ಕಥಾ ಜಗತ್ತಿನಲ್ಲಿ ಅವರ ಹಲವು ಕತೆಗಳ ಪ್ರಭಾವ ಇಂದಿಗೂ ಮಸುಕಾಗದೇ ಉಳಿದಿದೆ.

ಇನ್ನೊಮ್ಮೆ ಮಗ ಶಿವಪ್ಪ ಉಪ್ಪು ಮೆಣಸು ಮಿಶ್ರಿತವಾದ ವರದಿ ಒಪ್ಪಿಸಿದ: "ಅಂಗಡಿ ರಾಮಯ್ಯ ನಿಮ್ಮನ್ನು ಬೆಪ್ಪ ಬೋಧಾಳಶಂಕರ ಎಂದು ಗೇಲಿ ಮಾಡಿದ. 'ನಿನ್ನ ಅಪ್ಪನ ಬಾಯಲ್ಲಿ ಬೆರಳು ತುರುಕಿದರೂ ಕಚ್ಚಲೂ ತಿಳಿಯದು. ಮೆದುಳೇ ಇಲ್ಲ. ಮೇಲಿನ ಅಂತಸ್ತು ಖಾಲಿ' ಎಂದು ನಾಲ್ಕು ಜನರ ಮುಂದೆ ಹೇಳಿದ. ನನಗೆ ಬಹಳ ನಾಚಿಕೆ ಆಯಿತು" ಎಂದು.

ತಂದೆ ಹೇಳಿದ, "ಸುಮ್ಮನಿರೋ ಮಗು. ಅವರು ನನ್ನನ್ನು ಬುದ್ಧಿವಂತ ಪಂಡಿತ ಎಂದು ಹೊಗಳಿದ್ದರೆ ನಾನು ಪಂಡಿತನಾಗುತ್ತೇನೇ? ನನಗೆ ಸರಕಾರದಿಂದ ಬಿರುದು ಸಿಕ್ಕುತ್ತಿತ್ತೇ? ನಾನು ಮೂರ್ಖ ಎಂದ ಕೂಡಲೇ ನಾನು ಮೂರ್ಖನಾಗಿ ಬಿಟ್ಟೆನೇ? ಏನೋ ನಾಲಗೆ ಚಪಲಕ್ಕೆ